Regd No M 1229 | 43rd Year | Sri 'Satyavadi' Mysore | 3—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ಸಂನ್ಯೇದಾರ' ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಟಿಬೆಟ್‌ನ ದಲಾಯಿ ಲಾಮಾರಿಂದ ಭಾರತ ಪ್ರವೇಶ ?

ಹಾಂಗ್ ಕಾಂಗ್ 2 — ಟಿಬೆಟ್‌ನಲ್ಲಿನ ಧಾರ್ಮಿಕ ನಾಯಕ ದಲಾಯಿ ಲಾಮಾ ವಂಗಳವಾಂ ಭಾರತ ಪ್ರವೇಶ ಮಾಡಿದರೆಂದು ನವ ಚೀನಾ ವಾರ್ತಾ ಸಂಸ್ಥೆ ವಂದಿ ಮಾಡಿದೆ.

ವಾರ್ತಾ ಸಂಸ್ಥೆ ಪ್ರಕಾರ ದಲಾಯಿ ಲಾಮಾ ಮತ್ತಿತರರು ಮಾರ್ಚ್ 31 ನೇ ತಾ|| ಭಾರತ ಪ್ರವೇಶಿಸಿದರೆಂದು ಸಂಸ್ಥೆ ವಂದು ಮಾಡಿದೆ ಅಸ್ಸಾಮಿನ ಟ್ವಾಂಗಿನಿಂದ ಅವರನ್ನು ಬೀಟೆ ಮಾಡುವ ಸಲುವಾಗಿ ಭಾರತದ ಗಡಿ ಅಧಿಕಾರಿಗಳು ತೆರಳಿದರೆಂದೂ, ಚೀನೀ ವರದಿಗಾರರು ಅವರನ್ನು ತಲುಪಲು ಪ್ರಯತ್ನಿಸುತ್ತಿರುವರೆಂದು ಸಂಸ್ಥೆ ತಿಳಿಸುತ್ತದೆ. ಈ ದಿಸ್ಪುರ್ ಸರ್ಕಾರದ ವಲಯದಿಂದ ಇನ್ನೂ ಯಾವುದೇ ಸುದ್ದಿ ಬಂದಿಲ್ಲ.

ಪಿಟ್ಸ್‌ಬರ್ಗ್ ಬಗ್ಗೆ ಚರ್ಚೆ

ನವ ದೆಹಲಿ 2 — ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಟಿಬೆಟ್ಟಿಗೆ ಸಂಬಂಧಪಟ್ಟಂತೆ ಸೂಕ್ಷ್ಮ ಸಮಸ್ಯೆಗಳ ಪರಿಶೀಲನೆ ಮಾಡಿತೆಂದು ತಿಳಿದು ಬಂದಿದೆ

ಪಕ್ಷ ತ್ಯಜಿಸಿದರು

ಗಿದೆ. ಮಾ 31 — ಪಶ್ಚಿಮ ಬಂಗಾಳದ ಭಾರತದ ನಾಂ ಜಿಲ್ಲೆಯಿಂದ ಪಶ್ಚಿಮ ಬಂ ಕಾಂಗ್ರೆಸ್ ಅಭಿಮಾನದಿಂದ ಪಾಕಿಸ್ತಾನ ಸೇರಿದ್ದಾರೆ.

ಮಿಸೈಲ್ ಪ್ರಯೋಗ

ಕಾಲಿಂಪಾಂಗ್ 2 — ಟಿಬೆಟ್ಟಿನ ಪಶ್ಚಿಮ ಪ್ರಾಂತ್ಯದಲ್ಲಿ ಪ್ರಾರಂಭವಾಗಿ ದಿನದಿಂದ, ಚೀನಾ ಕಮ್ಯೂನಿಸ್ಟ್ ಪಕ್ಷದ ಮೇಲೆ ಪ್ರಾಯೋಗಿಕವಾಗಿ ಕ್ಷಿಪಣಿಗಳನ್ನು ಪ್ರಯೋಗಿಸಿದ್ದಾರೆಂದು ವಂದಿ

ಧಾನ್ಯ ವ್ಯಾಪಾರ

ನವ ದೆಹಲಿ 2 — ಅಕ್ಕಿ ಮತ್ತು ಗೋಧಿ ಮೂಲಕ ಸರ್ಕಾರದ ಆಹಾರ ಧಾನ್ಯ ವ್ಯಾಪಾರ ಆರಂಭ ಆಗುವುದಾಗಿ ಆಹಾರ ಮಂತ್ರಿ ಶ್ರೀ ಎ ಪಿ. ಜೈನ್ ಈ ದಿನ ತಿಳಿಸಿದರು.

ಪಂತರಿಂದ ಉತ್ತರ

ಬೆಂಗಳೂರು 2 — ಈ ದಿನ ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ಹೇಳಿಕೆಯಿತ್ತರು. ಗಡಿ ಕಲಹಗಳ ಬಗ್ಗೆ ಪ್ರಾಂತ ಸಲಹೆಗಳಿಗೆ ಪಂ|| ಪಂತರಿಂದ ಉತ್ತರ ಬಂದಿದೆ ಎಂದರು

ರಾಜೀನಾಮೆ

ಲಕ್ನೊ 2 — ಭಿನ್ನಾಭಿಪ್ರಾಯಗಳ ಕಾರಣ ಉತ್ತರ ಪ್ರದೇಶದ ಶ್ರೀ ಸಂಪೂರ್ಣಾನಂದರ ಮಂತ್ರಿಮಂಡಲಿಗೆ ರೆವಿನ್ಯೂ ಮಂತ್ರಿ ಶ್ರೀ ಚೌಧರಿ ಚರಣಸಿಂಗ್‌ರವರು ರಾಜೀನಾಮೆ ಸಲ್ಲಿಸಿದರು

ಹಂಗಾಮಿ ನೇಮಕ

ನವ ದೆಹಲಿ 2 — 3 ನೇ ತಾ|| ನಿಂದ ಮೈಸೂರು ಶ್ರೇಷ್ಠ ನ್ಯಾಯಾಲಯದ ಹಂಗಾಮಿ ಮುಖ್ಯ ನ್ಯಾಯಾಧೀಶರಾಗಿ ಶ್ರೀ ನಟ್ಟೂರು ಶ್ರೀನಿವಾಸರಾಯರ ನೇಮಕ ಆಗಿದೆ ಎಂದು ಗೃಹ ಸಚಿವ ಶಾಖೆ ಪ್ರಕಟಿಸಿದೆ.

ಅನೈಕ್ಯತೆಯಿಂದ ನಿರಾಕರಣೆ

ಪ್ರಸಿದ್ಧ ಕನ್ನಡ ಸಾಹಿತಿ ಶಮ್ಮ ಹೊಗರುಳು ಪುಸ್ತಕಕ್ಕೆ ಬಂದ ಎರಡನೆ ಬಹುಮಾನ ತಿರಸ್ಕರಿಸಿದ್ದಾರೆ ಜಾತೀಯತೆ, ಸ್ವಾರ್ಥ ಇವುಗಳಿಂದ ಬಹುಮಾನ ಹಂಚಿಕೆ ಕೂಡಿದೆ ಎಂದು ಅವರು ತಿಳಿಸಿದ್ದಾರೆ.

ಗಾಂಧಿ ದೇವರು

ಗುಡಿಬಂಡ 1 — ಅಬ್ಕಾರಿ ಮಂತ್ರಿ ಶ್ರೀ ಎಕ್ ರಾಜಯ್ಯನವರು ಹರಿಜನ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ, ಮಹಾತ್ಮಾ ಗಾಂಧಿಯವರಿಗೆ ಹರಿಜನರು ಚಿರಋಣಿಗಳಾಗಿರಬೇಕು ಹರಿಜನರಿಗೆ ಗಾಂಧಿಯವರು ದೇವರ ಸಮಾನ ಎಂದರು

ಸಾಕ್ಷರತೆ

ತಿರುವೇಂದ್ರಂ ಮಾ 31 — ಕೇರಳದಲ್ಲಿ ಶೇಕಡ 50 ರಷ್ಟು ಹತ್ತಿರ ಸಾಕ್ಷರತೆ ಇದೆ ಅಲ್ಲಿ 10711 ಶಿಕ್ಷಣ ಸಂಸ್ಥೆಗಳಿವೆ

ಬಿಕ್ಕಟ್ಟು ಬಲವಾಯಿತು

ರಷ್ಯ-ಸಂಯುಕ್ತ ಅರಬ್ ರಾಜ್ಯ ಬಿಕ್ಕಟ್ಟು ಬಲವಾಯಿತೆಂದು ಕೈರೊ ವರದಿ ತಿಳಿಸುತ್ತದೆ.

ಆಗಮಿಸುವ ಸಂಭವ

ಕಲ್ಕತ್ತಾ 2 — ಪೂರ್ವ ಜರ್ಮನಿಯ ಫುಟ್ಬಾಲು ಟೀಂ ಭಾರತಕ್ಕೆ ಬರುವ ಸಂಭವವಿದೆ.

ಅಸತ್ಯ

ನವ ದೆಹಲಿ 2 — ಟಿಬೆಟ್ಟಿನ ದಂಗ ಕೇಂದ್ರ ಕಾಲಿಂಪಾಂಗ್ ಎಂದು ಚೀನಿ ಅಧಿಕಾರಿಗಳು ಮಾಡಿರುವ ಆರೋಪ ಅಸತ್ಯವೆಂದು ಪಂ|| ನೆಹರು ತಿಳಿಸಿದರು

ಭಾರಿ ಕಾದಲು

ಕಾಲಿಂಪಾಂಗ್ 2 — ಇಲ್ಲಿಗೆ ಬಂದಿರುವ ವಂದಿ ಪ್ರಕಾರ ಲಾಸಾದಲ್ಲಿನ ಭಾರತ ಕಾನ್ಸಲಿಗೆ ಚೀನಿ ಅಧಿಕಾರಿಗಳು ಕಾವಲು ಹಾಕಿದ್ದಾರೆ.

ದಾಲ್ಮಿಯಾ ಮೊಕದ್ದಮೆ

ನವ ದೆಹಲಿ 2 — ದಾಲ್ಮಿಯಾ ಮೊಕದ್ದಮೆಯಲ್ಲಿ 55 ದಿನಗಳ ವಾದ ಈ ದಿನ ತೀರಿತು ಮೇ 20 ರಂದು ತೀರ್ಪನ್ನು ಕೊಡಲಾಗುವದು.

ಪ್ರದರ್ಶನ

ಬೆಂಗಳೂರು 2 — ಶೇಕಡ 15 ಕ್ಕೆ ಕ್ಕೆ ವಿುೀರಿ ಹಾಜರಾತಿ ವಿನಾಯಿತಿ ಕೊಡಕೂಡದೆಂದು ವಿಶ್ವವಿದ್ಯಾನಿಲಯ ತೀರ್ಮಾನ ಮಾಡಿರುವದನ್ನು ಪ್ರತಿಭಟಿಸಿ ನೂರಾರು ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು.

ಜನಸಮ್ಮತಿ ಅವಶ್ಯಕ

ರಾಜಸ್ತಾನದ ಸೂರತ್‌ಘರದಲ್ಲಿ ಪಂ|| ನೆಹರು ನಿನ್ನೆ ಮಾತನಾಡುತ್ತಾ, ಜನಸಮ್ಮತಿ ಮೇರೆ ಸಹಕಾರ ವ್ಯವಸಾಯ ಪದ್ಧತಿ ತರುವದಾಗಿ ತಿಳಿಸಿದರು

ಸಮ್ಮೇಳನಕ್ಕೆ ಕಾಣಿಕೆ

ಸೊಂಬದ ಪೌಂಸಭೆ ಬೆಂಗಳೂರಿನಲ್ಲಿ ಸೇರುವ ಪ್ರಾಂತ ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ರೂ 10 ಕೊಡುವ ನಿರ್ಧಾರ ಮಾಡಿದೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ
4 ದ್ವಾದಶಿ ಧನಿಷ್ಠ

ನವ ದೆಹಲಿ 2 — ಪ್ರಧಾನಿ ನೆಹರು ಲೋಕಸಭೆಯಲ್ಲಿ ಹೇಳಿಕೆಯಿತ್ತು, ಬೆರುಬಾರಿ ವರ್ಗಾವಣೆ ಬಗ್ಗೆ ರಾಷ್ಟ್ರಪತಿಯವರು ಸುಪ್ರೀಂ ಕೋರ್ಟಿನ ಅಭಿಪ್ರಾಯ ಕೇಳುವರೆಂದರು

ರೈಲ್ವೆಗಾಗಿ ವಿದೇಶೀ ವಿನಿಮಯ

ನವದೆಹಲಿ : — ದ್ವಿತೀಯ ಯೋಜನಾವಧಿಯ ಮೊದಲನೆಯ ಮೂರು ವರ್ಷಗಳಲ್ಲಿ ರೈಲ್ವೆಗಳಿಗಾಗಿ ಒಟ್ಟು 254 ಕೋಟಿ ರೂಗಳಷ್ಟು ವಿದೇಶಿ ವಿನಿಮಯ ಋಣವನ್ನು ಬಳಸಿಕೊಳ್ಳಲಾಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ ಂ ಂ

ಸಲಹಾ ಸಮಿತಿ

ನವದೆಹಲಿ 2— ಭಾರತ ಸರಕಾರದವರು ಜನಗಳ ರೋಗರುಜಿನಾದಿಗಳ ಸಂಬಂಧವಾದ ಅಧ್ಯಯನಕ್ಕಾಗಿ ಒಂದು ಸಲಹಾ ಸಮಿತಿಯನ್ನು ನೇಮಿಸಲು ನಿರ್ಧರಿಸಿರುವರು ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ ಂ ಂ

ನಾಸರೆಯವರ ವಿಚಾರ

ಈ ಜಿಪ್ಸಿನ ಅಧ್ಯಕ್ಷ ನಾಸರೆ ಅಲೆಗ್ಜಾಂಡ್ರಿಯಾದ ಪೋಸ್ಟಾಫೀಸು ನೌಕರನ ಪುತ್ರ ; ಈತನಿಗೆ ಸಿನೀಮಾ ನೋಡುವ ಹುಚ್ಚು ; ಪರೀಕ್ಷೆಗಳಿಗೆಲ್ಲಾ ಚಕ್ಕರು ಕೊಟ್ಟು, ಸ್ಕೂಲಿಗೆ ಗೈರುಹಾಜರಾಗುತ್ತಾ, ಸಿನೀಮಾ ನೋಡುತ್ತಿದ್ದನು : ಕನ್ನ 16 ನೇ ವರ್ಷದಿಂದ ರಾಜಕೀಯ ಚಳವಳಿಯಲ್ಲಿ ಪ್ರವೇಶಿಸಿ, ರಸ್ತೆಯ ಕದನಗಳಲ್ಲಿ ಭಾಗವಹಿಸುತ್ತಿದ್ದನು — ಒಂದು ಸಾರಿ ಅವನನ್ನು ಸ್ಕೂಲಿನಿಂದ ಹೊಂದೂಡಿದಾಗ, ಅವನನ್ನು ಕುರಿತು ಅವನ ತಂದೆಯು ' ರಾಜಕೀಯಕ್ಕೆ ಸೇರಿ ನಿನ್ನ ಜೀವನಮಾನವನ್ನು ಹಾಳುಮಾಡಿಕೊಳ್ಳುವಿ : ಸ್ಕೂಲಿನಲ್ಲಿ ನೀನು ಅಪಜಯಿಯಾದೆ ; ನೀನು ಪಡೆಯುವ ಸ್ವಾತಂತ್ರ್ಯದ ಫಲವಿದು ' ಎಂದು ಹೇಳಿದನು.

ಂ ಂ ಂ ಂ

ಉಚಿತ ಹಾಲು

ಜಿನೀವಾ ಮೇ 30— ಯುನಿಸೆಫ್ ಒದಗಿಸಿರುವ ಒಂದು ದಶಲಕ್ಷ ಡಾಲರುಗಳ ಗ [illegible]ಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಮುಂಬೈ ಶಾಲಾ ಮಕ್ಕಳು ಉ [illegible] ಹಾಲನ್ನು ಪಡೆಯಲಿದ್ದಾರೆ — ಪ್ರಕೃತ ಕ್ಷೀರ ವಿಜ್ಞಾನದ ವಸ್ತು ಸಮ [illegible] ಪಂಚಿಕೆಯ ಕ್ಷೇತ್ರದಲ್ಲಿ ಮುಂದುವರಿದ ಕಾರ್ಯಕ್ರಮ ಕೈಗೊಂಡಿರುವ ವಸ್ತು ಅಂತರಾಷ್ಟ್ರೀಯ ಯುನಿಸೆಫ್‌ನಿಂದ ಹಣ ಸಹಾಯ ಪಡೆದ ಮುಂಬಾಯಿ ಸರಕಾರಿ ಸ್ವಯಂಸಂಸ್ಥೆಯೊಂದರ ವಿಸ್ತರಣದಿಂದ ಮಕ್ಕಳಿಗೆ ಹಾಲನ್ನು ಒದಗಿಸ [illegible]ಗುವುದು — ಮಕ್ಕಳ ನಿಧಿಯನ್ನು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಯಿತ [illegible] ಅಂತಹ ಉದ್ದೇಶ ಸಾಧನೆಗೆ ಮಾದರಿಯಾದ ಗ್ರಾಂಟು ಇದು .... ಮಕ್ಕಳ [illegible] ಯೋಗ್ಯ ಮತ್ತು ಸಂತೋಷಗಳಿಗಾಗಿ ಕೈಗೊಳ್ಳಲಾದ ಘನವಾದ ಕಾರ್ಯವಿದು, ಎಂಬುದಾಗಿ ನ್ಯೂಯಾರ್ಕ್ ಟೈಂಸಿನ ಭಾನುವಾರದ ಸಂಚಿಕೆಯ ಅಗ್ರಲೇಖನದಲ್ಲಿ ಈ ಗ್ರಾಂಟಿನ ಉದ್ದೇಶವನ್ನು ಕುರಿತು ನುಡಿಯಲಾಗಿದೆ — ಹಾಲನ್ನು ಸಿದ್ಧಪಡಿಸುವ, ಸೀಸೆಗೆ ತುಂಬುವ ಶೈತ್ಯಬಂಧಕ ಸ್ಥಿತಿಯಲ್ಲಿ ಇಡುವಯಿಂತ್ರ ಪ್ರತಿದಿನ ಪ್ರತಿಯೊಂದಕ್ಕೆ 150000 ಕ್ವಾರ್ಟ್ ಹಾಲನ್ನು ಸಿದ್ಧಪಡಿಸುವುದು; ಮುಂಬೈ ಸರಕಾರದ 5000000 ಡಾಲರುಗಳ ಕೊಡುಗೆಯನ್ನು ನೀಡಲಿದೆ.

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೀವಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಪೋಷಕರು ರೂ 25, ಜೀವಲಿಗರು ರೂ 10 (ಒಂದೇ ಸಾರಿ)

Advertise in Gora'ksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ITEOL-3

THE IDEAL ANTISEPTIC

Non-poisonous, non-corrosive and pleasant smelling. Available in 4 oz and 16 oz. bottles and 1 gallon tins.

TRADE MARK

THE MYSORE INDUSTRIAL & TESTING LABORATORY LTD., BANGALORE-3,
Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—
71/4 Arcot Sreenivasachar St., Bangalore 2.

ವುಡ್‌ಲಾಂಡ್ ಚಿತ್ರ — **ತಾ. 3—4—59 ನೇ ಶುಕ್ರವಾರದಿಂದ**

ಯುಲ್. ಬಿ. ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂತನ್ ರಾಜ್ ಕಪೂರ್
ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿ ಕುಮಾರ್ ಮುಖರ್ಜಿ
ಸಂಗೀತ : ಶಂಕರ್ ಜೈಕಿಷನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

ಅಪೆರಾ— 3—4—59 ರಿಂದ

ಸಕಲರೂ ನೋಡಬೇಕಾದ ಮನೋಜ್ಞ ಪೌರಾಣಿಕ ಚಿತ್ರ

ನತೀ ತುಲಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಂಡು

ಪ್ರತಿದಿನ 3 ಆಟಗಳು

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ
ಅ ಶೋ ಕಾ ಫಾರ್ಮಸಿ
ಅಶ್ವಾನ್ಸ್‌ಡೌನ್ ಬಜಾರ್ ಮೈಸೂರು

For Quality Printing
L. N. Press
Sivarampet, Mysore

Edited, Printed & Published by Dharma Prachara Kerala M S Krishna Rao, at the Satyavadi Press Chamarajapuram, Mysore.